**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು**

**ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03**

**ದೂರವಾಣಿ ಸಂಖ್ಯೆ: 23341615, 23562283, ಫ್ಯಾಕ್ಸ್: 080-23347670**

ಸಂಖ್ಯೆ:ಕೆ5/ಹೆಳೆ.ಕಾಗದ-ವಿಲೇವಾರಿ/38/2021-22 ದಿನಾಂಕ:19-03-2022

**ದರಪಟ್ಟಿ ಆಹ್ವಾನ ಪತ್ರ**

ವಿಷಯ:- 2019-20 ಮತ್ತು 2020-21ನೇ ಸಾಲಿನಲ್ಲಿ ಶೇಖರಣೆಯಾಗಿರುವ ಹಳೆ ಕಾಗದ ವಿಲೇವಾರಿ ಮಾಡುವ ಕಾರ್ಯಕ್ಕೆ ದರಪಟ್ಟಿ ಆಹ್ವಾನಿಸುವ ಬಗ್ಗೆ,

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ 2019-20 ಮತ್ತು 2020-21ನೇ ಸಾಲಿನಲ್ಲಿ ಕೆ.ಎಸ್.ಕ್ಯು.ಎ.ಎ.ಸಿ ವತಿಯಿಂದ ನಡೆಸಿರುವ ವಿವಿಧ ಪರೀಕ್ಷೆಗಳ OMR, CNR, ಹಾಗು ಉತ್ತರ ಪತ್ರಿಕೆಗಳ ಅನಪಯುಕ್ತ ಗೊಂಡಿದ್ದು ಇವುಗಳನ್ನು ವಿಲೇವಾರಿ ಮಾಡಬೇಕಿದ್ದು, ಅರ್ಹ ಸಂಸ್ಥೆಗಳಿಂದ ವಿಲೇವಾರಿಗಾಗಿ ಈ ಕೆಳಕಂಡ ಷರತ್ತುಗಳನ್ವಯ ದರಪಟ್ಟಿ ಆಹ್ವಾನಿಸಲಾಗಿದೆ, ಹೆಚ್ಚಿನ ವಿವರಗಳಿಗಾಗಿ ಕಛೇರಿಯ ಅವಧಿಯಲ್ಲಿ ಭೇಟಿ ನೀಡಿ ಮಾಹಿತಿ ಪಡೆಯುವುದು.

ಮುಚ್ಚಿದ ಸೀಲ್ ಆದ ಕವರ್‌ಮೇಲೆ **" ಹಳೆ ಕಾಗದದ ವಿಲೇವಾರಿಗಾಗಿ ದರಪಟ್ಟಿ"** ಎಂಬುದಾಗಿ ನಮೂದಿಸಿ ದರಪಟ್ಟಿಯನ್ನು ಕೆಳಕಂಡ ನಮೂನೆಯಲ್ಲಿ ದಿನಾಂಕ: **28-03-2022ರ ಸಂಜೆ 5-00** ಗಂಟೆಯೊಳಗಾಗಿ ಈ ಕಛೇರಿಗೆ ಸಲ್ಲಿಸುವುದು.

**ದರಪಪಟ್ಟಿ ನಮೂನೆ**

| ಕ್ರಮ ಸಂಖ್ಯೆ | ಸಾಮಗ್ರಿಗಳು | ಪ್ರತಿ ಕೆ.ಜಿ.ಗೆ ದರ ರೂ | ಷರಾ |
|---|---|---|---|
| 01 | ಹಳೆ ಕಾಗದಗಳು/ ಒ.ಎಂ.ಆರ್, ಉತ್ತರ ಪತ್ರಿಕೆ ಮತ್ತು CNR, ಇತ್ಯಾದಿ | | |

**ಷರತ್ತುಗಳು:-**

1. ಈ ಪತ್ರದಲ್ಲಿ ಸೂಚಿಸಿದ ನಮೂನೆಯಲ್ಲೇ ದರಪಟ್ಟಿ ನೀಡತಕ್ಕದ್ದು.
2. ಅತಿ ಹೆಚ್ಚು ದರ ನಮೂದಿಸಿ ಹೆಚ್-1 ಆದ ಸಂಸ್ಥೆಯವರನ್ನು ಆಯ್ಕೆಮಾಡಲಾಗುವುದು.
3. ದರಪಟ್ಟಿಯಲ್ಲಿ ನಮೂದಿಸಿರುವ ದರವೇ ಅಂತಿಮವಾಗಿದ್ದು, ನಂತರದಲ್ಲಿ ಹೆಚ್ಚುವರಿ ಬಿಲ್ ಸಲ್ಲಿಸಲು ಅವಕಾಶವಿರುವುದಿಲ್ಲ. ಬಿಲ್ಲಿನಲ್ಲಿ ನಿಯಾಮಾನುಸಾರ ತೆರಿಗಳನ್ನು ಕಟಾವಣೆ ಮಾಡಿ ಸಲ್ಲಿಸುವುದು.
4. ಒಂದು ಸಂಸ್ಥೆಯವರು ಒಂದೇ ದರಪಟ್ಟಿ ನೀಡುವುದು.
5. ವಿಲೇವಾರಿ ಕಾರ್ಯವನ್ನು ಕಾರ್ಯಾದೇಶ ನೀಡಿದ 04 ದಿನಗಳ ಒಳಗೆ ಪೂರ್ಣಗೊಳಿಸುವುದು. ಈ ಕಾರ್ಯಕ್ಕೆ ಕಛೇರಿಯಿಂದ ಯಾವುದೇ ಸಹಾಯಕರನ್ನಾಗಲೀ, ಸಾಗಾಣಿಕೆ ವೆಚ್ಚವನ್ನಾಗಲೀ ನೀಡುವುದಿಲ್ಲ.
6. ಆಯ್ಕೆಯಾದ ಸಂಸ್ಥೆಯವರು ವಿಲೇವಾರಿಗೆ ಮುನ್ನ ರೂ 10,000/-ಗಳ ಮೊತ್ತಕ್ಕೆ ಬ್ಯಾಂಕ್ ಹುಂಡಿಯನ್ನು ಮುಂಗಡವಾಗಿ " Executive Director KSQAAC, Bangalore " ರವರ ಹೆಸರಿಗೆ ಸಲ್ಲಿಸಬೇಕು.
7. ಗೋದಾಮಿನಲ್ಲಿರುವ ಎಲ್ಲಾ ಹಳೆಯ ಕಾಗದಗಳಿಗೂ ಸೂಚಿತ ದರವೇ ಅನ್ವಯವಾಗುತ್ತದೆ.
8. ಸೂಚಿಸಲಾಗಿರುವ ಕೆಲಸವನ್ನು ಪೂರ್ಣಗೊಳಿಸಿದ ನಂತರ ಬಿಲ್ಲಿನ ಮೊತ್ತದಲ್ಲಿ 2% ಟಿ.ಡಿ.ಎಸ್ ಅನ್ನು ಕಟಾಯಿಸಿ ಉಳಿಕೆ ಮೊತ್ತವನ್ನು ಚೆಕ್ ಮೂಲಕ ಪಾವತಿಸಲಾಗುವುದು.
9. ಆಯ್ಕೆಯಾದ ಸಂಸ್ಥೆಯವರು ಅಧಿಕಾರಿಗಳ ಸಮ್ಮುಖದಲ್ಲಿ ವಿಲೇವಾರಿಯ ದಿನ ತೂಕಕ್ಕೆ ಅನುಗುಣವಾಗಿ ಸೂಚಿತ ದರವನ್ನು ಲೆಕ್ಕಮಾಡಿ ವಿಲೇವಾರಿಗೆ ಮುನ್ನ ನೀಡಲಾಗುವ ರೂ 10,000/-ಗಳ ಮೊತ್ತವನ್ನು ಕಳೆದು ಉಳಿದ ಪೂರ್ಣ ಮೊತ್ತವನ್ನು ಒಂದೇ ಬಾರಿಗೆ ಬ್ಯಾಂಕ್ ಹುಂಡಿಯ ಮೂಲಕ ಪಾವತಿಸಿದ ನಂತರವೇ ಅನುಪಯುಕ್ತ ಕಾಗದ ತೆಗೆದುಕೊಂಡು ಹೋಗಲು ಅನುಮತಿ ನೀಡಲಾಗುವುದು.

ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯು.ಎ.ಎ.ಸಿ

ಪ್ರತಿಗಳು

1. ಕಛೇರಿಯ ಸೂಚನಾ ಫಲಕಕ್ಕೆ ಮಾಹಿತಿಗಾಗಿ.